ನಿರ್ದೇಶಕರ ಕಛೇರಿ
ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22864212.
ಫ್ಯಾಕ್ಸ್: 080-22863618.
**Email: directorgokdom@gmail.com**
**Web: www.gokdom.kar.nic.in**
20ನೇ ಮಹಡಿ, ವಿ.ವಿ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

---

**ಸಂಖ್ಯೆ: ಅಸಂನಿ/ವಿ.ವೇ/ಇಡಿಎನ್/ಸಿಆರ್-03/20201-22** ದಿನಾಂಕ:- 16.09.2021

**ಜರೂರು**

ಗೆ,

ಉಪ ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
__ಎಲ್ಲಾ____________ ಜಿಲ್ಲೆ

**ವಿಷಯ:-** ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು 2021-22 ನೇ ಸಾಲಿನ ರಾಷ್ಟ್ರ ವಿದ್ಯಾರ್ಥಿವೇತನ ಪೋರ್ಟಲ್ (National Scholarship Portal-NSP) ನಲ್ಲಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನದ ಅರ್ಜಿಗಳನ್ನು ಆನಲೈನ್‌ನಲ್ಲಿ ಸಲ್ಲಿಸುವ ಮತ್ತು ಈ ಅರ್ಜಿಗಳ ಪರಿಶೀಲನೆಯ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರ ವಿಧಿಸಿರುವ ನಿಯಮಾನುಸಾರ ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ 2021-22 ನೇ ಸಾಲಿನ ರಾಷ್ಟ್ರ ವಿದ್ಯಾರ್ಥಿವೇತನ ಪೋರ್ಟಲ್ (National Scholarship Portal-NSP) ನ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನದ ಅರ್ಜಿಗಳನ್ನು ಆನಲೈನ್ ಮೂಲಕ ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕವನ್ನು ದಿನಪತ್ರಿಕೆಗಳಲ್ಲಿ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ದಿನಾಂಕ:- 15.09.2021 ರಂದು ಹೊರಡಿಸಲಾಗಿದೆ.ಪ್ರತಿ ವರ್ಷದಂತೆ ತಮ್ಮ ಮತ್ತು ತಮ್ಮ ಇಲಾಖೆಯ ಸಹಕಾರ ಮತ್ತು ಕಾರ್ಯವನ್ನು ಸರ್ಕಾರ ಮತ್ತು ಅಲ್ಪಸಂಖ್ಯಾತರ ಇಲಾಖೆ ಮೆಚ್ಚಿದೆ.

ಪ್ರತಿ ವರ್ಷದಂತೆ ಈ ವರ್ಷವೂ ತಾವುಗಳು ಕೈಗೊಳ್ಳಬೇಕಾದ ಕ್ರಮ ಈ ಕೆಳಗೆ ನಮೂದಿಸಿರುವಂತೆ ಇರುತ್ತದೆ.

ಅ) ಸರ್ಕಾರ ವಿಧಿಸಿರುವ ಮಾರ್ಗದರ್ಶನದಂತೆ ಪ್ರತಿಯೊಬ್ಬ ಅರ್ಹ ಅಲ್ಪಸಂಖ್ಯಾತರ ವಿದ್ಯಾರ್ಥಿಯು ರಾಷ್ಟ್ರ ವಿದ್ಯಾರ್ಥಿವೇತನ ಪೋರ್ಟಲ್ (National Scholarship Portal-NSP) ನ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸುವುದು ಮತ್ತು ಆನ್‌ಲೈನ್ ಅರ್ಜಿ ಜೊತೆಯೊಂದಿಗೆ ನಿಗದಿಪಡಿಸಿರುವ ದಾಖಲೆಗಳೊಂದಿಗೆ ಅರ್ಜಿಗಳನ್ನು ಅವರವರ ಮುಖ್ಯೋಪಾಧ್ಯಯರಿಗೆ ಸಲ್ಲಿಸಬೇಕು, ಮುಖ್ಯೋಪಾಧ್ಯಯರು ವಿದ್ಯಾರ್ಥಿಗಳಿಂದ ಸ್ವೀಕರಿಸಲಾದ ಅರ್ಜಿಗಳನ್ನು ಮುಂದಿನ ಮಾಹಿತಿಗಾಗಿ ಅವರಲ್ಲಿ 5 ವರ್ಷಗಳ ಕಾಲ ಇಟ್ಟುಕೊಳ್ಳತಕ್ಕದ್ದು.

ಆ) ಶಿಕ್ಷಣ ಇಲಾಖೆಯ ಜಿಲ್ಲಾ ECO (ಉರ್ದು) ರವರನ್ನು ಜಿಲ್ಲೆಯ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನದ DISTRICT NODAL OFFICER-DNO (ಜಿಲ್ಲಾ ನೋಡಲ್ ಅಧಿಕಾರಿ) ಯನ್ನಾಗಿ ನೇಮಿಸಬೇಕು. ಒಂದು ವೇಳೆ ಜಿಲ್ಲೆಯಲ್ಲಿ ECO (ಉರ್ದು)ರವರು ಇಲ್ಲದ ಪಕ್ಷದಲ್ಲಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನದ ಯೋಜನೆಯ ಬಗ್ಗೆ ಅನುಭವವುಳ್ಳವರನ್ನು ನೋಡಲ್ ಅಧಿಕಾರಿಯನ್ನು ನೇಮಿಸಬೇಕೆಂದು ಸೂಚಿಸಲಾಗಿದೆ. ಅದು ಸಾಧ್ಯವಿಲ್ಲದ ಪಕ್ಷದಲ್ಲಿ ಜಿಲ್ಲೆಯ ಯಾರಾದರೂ ಅನುಭವವುಳ್ಳ ಸಿ.ಆರ್.ಪಿ (ಉರ್ದು)ರವರನ್ನು ನೇಮಿಸಬಹುದಾಗಿರುತ್ತದೆ. ಇವರ ಕುರಿತಾದ ಮಾಹಿತಿಯನ್ನು ಲಗ್ಗತ್ತಿಸಿರುವ Format ನಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

ಪು.ತಿ.ನೋ

ಇ) National Scholarship Portal-NSP ನಲ್ಲಿ ಹೊಸ ಶಾಲೆಗಳು KYC ನೋಂದಣಿಗೊಳ್ಳುವಂತೆ ಕ್ರಮವಹಿಸುಸುವುದು. ಈ ಪ್ರಕ್ರಿಯೆಗೆ ಸಂಬಂಧಿಸಿದ ವಿಧಾನ ಮತ್ತು USER MANUAL ಅನ್ನು ಈ ಪತ್ರದೊಂದಿಗೆ ಲಗ್ಗತ್ತಿಸಿಲಾಗಿದೆ.

ಈ) KYC ನೋಂದಣಿಯನ್ನು ಈಗಾಗಲೇ ಪೂರ್ಣಗೊಳಿಸಿದ ಶಾಲೆಗಳು ತಮ್ಮ INSTITUTE LOGIN ನಲ್ಲಿ ತಮ್ಮ PROFILE UPDATE ಅನ್ನು ಮಾಡಿಕೊಳ್ಳುವಂತೆ ಸೂಚಿಸುವುದು.ಇದಕ್ಕೆ ಸಂಬಂಧಿಸಿದ ವಿಧಾನಗಳು ಈ ಪತ್ರದೊಂದಿಗೆ ಲಗ್ಗತ್ತಿಸಿದ USER MANUAL ನಲ್ಲಿ ಲಭ್ಯವಿದೆ.

ಉ) National Scholarship Portal-NSP ನಲ್ಲಿ ಯಾವುದಾದರೂ ಶಾಲೆಗಳ ಬಳಿ USER ID PASSWORD ಇಲ್ಲದಿದ್ದಲ್ಲಿ , ಅಂತಹ ಶಾಲೆಗಳು ಈ ಪತ್ರದೊಂದಿಗೆ ಲಗ್ಗತ್ತಿಸಿರುವ Format ಅನ್ನು ಪೂರ್ಣಗೊಳಿಸಿ ಸಂಬಂಧಿಸಿದ DISTRICT NODAL OFFICER ರವರಿಗೆ ಸಲ್ಲಿಸುವಂತೆ ಸೂಚಿಸುವುದು. ಈ Format ಅಲ್ಪಸಂಖ್ಯಾತರ ಇಲಾಖೆಯ ಜಾಲತಾಣದಲ್ಲಿಯು ಸಹ ಲಭ್ಯವಿರುತ್ತದೆ.

ಊ) ತಮ್ಮ ಜಿಲ್ಲೆಯ DISTRICT LOGIN ನಲ್ಲಿ NODAL OFFICER ಆಗಿ ನೇಮಿಸಿರುವ ECO (ಉರ್ದು) ರವರ AADHAR AUTHENTICATION ಅನ್ನು ಪೂರ್ಣಗೊಳಿಸುವಂತೆ ತಿಳಿಸುವುದು. ಈ ವಿಧಾನದ ಕುರಿತಾದ ಹಂತಗಳನ್ನು ಈ ಪತ್ರದೊಂದಿಗೆ ಲಗ್ಗತ್ತಿಸಿಲಾಗಿದೆ.

ಈ ಯೋಜನೆಯನ್ನು ಸೂಸುತ್ರವಾಗಿ ಯಶಸ್ವಿಗೊಳಿಸಲು ತಮ್ಮ ಮತ್ತು ತಮ್ಮ ಇಲಾಖೆಯ ಎಲ್ಲಾ ಅಧಿಕಾರಿಗಳ ಹಾಗೂ ಸಿಬ್ಬಂದಿಯವರ ಸಹಕಾರವನ್ನು ಪ್ರತಿ ವರ್ಷದಂತೆ ನೀಡಬೇಕೆಂದು ಕೋರಲಾಗಿದೆ. ಈ ಯೋಜನೆಯು ಮುಖ್ಯವಾಗಿ ಶಿಕ್ಷಣ ಇಲಾಖೆಯಿಂದ ಜಾರಿಗೊಳಿಸಬೇಕಾಗಿರುವುದರಿಂದ ತಮ್ಮ ಸಂಪೂರ್ಣ ಸಹಕಾರ ಇರುತ್ತದೆ ಎಂದು ಭಾವಿಸಲಾಗಿದೆ.

ನಿರ್ದೇಶಕರು 16/9/21
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು

<u>ಟಿಪ್ಪಣಿ:-</u>

ಕರ್ನಾಟಕ ಸರ್ಕಾರದಿಂದ ವಿದ್ಯಾರ್ಥಿವೇತನವನ್ನು ಪಡೆಯಲು ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ರಾಷ್ಟ್ರ ವಿದ್ಯಾರ್ಥಿವೇತನ ಪೋರ್ಟಲ್ (National Scholarship Portal-NSP) ಮತ್ತು ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (State Scholarship Portal-SSP) ಗಳಲ್ಲಿ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ.

ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (State Scholarship Portal-SSP) ನ ಬಗ್ಗೆ ಮಾಹಿತಿಯನ್ನು ನಂತರದಲ್ಲಿ ತಿಳಿಸಲಾಗುವುದು.

<u>ಪ್ರತಿಯನ್ನು:-</u>

ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ

____ಎಲ್ಲಾ____ ತಾಲೂಕು. ____ಎಲ್ಲಾ____ ಜಿಲ್ಲೆ.